## ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.

**ಅಪರಾಧ ಪ್ರಕರಣ ಸಂಖ್ಯೆ: 50/2018**

| | | |
|---|---|---|
| **ಸಾಕ್ಷಿಯ ಹೆಸರು** | ಎಂ.ಹೆಚ್.ಆನಂದ | ಚಾಸಾ-15 |
| **ಉದ್ಯೋಗ** | ನಿವೃತ್ತ ಪಿ ಎಸ್ ಐ | ಪ್ರಾಸಾ-6 |
| **ವಾಸ ಸ್ಥಳ** | ಹಾಸನ | |
| **ದಿನಾಂಕಃ 08.08.2024** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ.**

ನಾನು ದಿನಾಂಕ 23.07.2013 ರಿಂದ 16.05.2020 ರವರೆಗೆ ಅರಕಲಗೂಡು ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಕರ್ತವ್ಯ ನಿರ್ವಹಿಸಿರುತ್ತೇನೆ. .

ದಿನಾಂಕ 23.09.2017 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಸಂಜೆ 7 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 282/2017 ರಂತೆ ಪ್ರಕರಣವನ್ನು ಕಲಂ 279, 337 ಸಹವಾಚಕ 187 ಐ ಎಂ ವಿ ಆಕ್ಟ್ ದಾಖಲಿಸಿ ಪ್ರ.ವ.ವ ವನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ ಸದರಿ ಪ್ರಕರಣದ ಬಗ್ಗೆ ಪಿ ಎಸ್ ಐ ರವರಾದ ರೇವಣ್ಣ ರವರ ಗಮನಕ್ಕೆ ತಂದಿದ್ದು , ಅವರ ಮೌಖಿಕ ಆದೇಶದ ಮೇರೆಗೆ ತನಿಖೆಯನ್ನು ನಾನೇ ಮುಂದುವರೆಸಿರುತ್ತೇನೆ.

ದಿನಾಂಕ 24.09.2017 ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಸ್ಥಳಕ್ಕೆ ಪಂಚರಾದ ವೆಂಕಟೇಶ ಬಿನ್ ಹನುಮಶೆಟ್ಟಿ, ವೆಂಕಟರಾಮು ಬಿನ್ ಸ್ವಾಮೀಗೌಡ ರವರನ್ನು ಬರಮಾಡಿಕೊಂಡು ಪಂಚರಾಗಲು ಕೋರಿದ್ದು, ಅಲ್ಲಿಯೇ ಸ್ಥಳದಲ್ಲಿ ಚಾಸಾ 1 ರವರು ಹಾಜರಿದ್ದು ಅವರು ಕೃತ್ಯ ಸ್ಥಳವನ್ನು ತೋರಿಸಿದ ಮೇರೆಗೆ ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಿಗ್ಗ 9 ರಿಂದ 10 ಗಂಟೆಯವರೆಗೆ ಕೃತ್ಯ ಸ್ಥಳದ ಮಹಜರನ್ನು ಮಾಡಿರುತ್ತೇನೆ ಹಾಗೂ ಮಹಜರ್ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ಪೋಟೋ ತೆಗೆದು ನಕಾಶೆಯನ್ನು ತಯಾರಿಸಿ ಅಪಘಾತಕ್ಕೆ ಸಂಬಂದಿಸಿದ ಬೈಕ್ ಕೃತ್ಯ ಸ್ಥಳದಲ್ಲಿ ಇದ್ದಿದ್ದನ್ನು ಮಹಜರ್ ಸಮಯದಲ್ಲಿ ಕೆಎ-02 ಇಪಿ-8450 ರ ಬೈಕನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 05.10.2017 ರಂದು ವಶಪಡಿಸಿಕೊಂಡಿದ್ದ ಬೈಕನ್ನು ತಪಾಸಣೆ ನಡೆಸಿ ಐ ಎಂ ವಿ ವರದಿ ನೀಡುವಂತೆ ಕೋರಿ ಹಾಸನದ ಆರ್.ಟಿ.ಓ ಅಧಿಕಾರಿಗಳಿಗೆ ಅರ್ಜಿ ಬರೆದಿರುತ್ತೇನೆ. ಮುಂದುವರೆದು ದಿನಾಂಕ 07.10.2017 ರಂದು ಪಿರ್ಯಾದಿಯವರ ಮಗ ರವಿ ಎಂಬುವರು ಠಾಣೆಗೆ ಹಾಜರಾಗಿ ಗಾಯಾಳುವಾಗಿದ್ದ ತನ್ನ ಸಹೋದರ ಕುಮಾರ ರವರು ದಿನಾಂಕ 22.09.2017 ರಂದು ಸಂಜೆ 8.45 ಕ್ಕೆ ಮೃತರಾಗಿರುತ್ತಾರೆ ಎಂದು ಮತ್ತೊಂದು ದೂರನ್ನು ನೀಡಿದ್ದು ಈ ದೂರನ್ನು ಪಡೆದು ಸದರಿ ದೂರಿನೊಂದಿಗೆ ಕಲಂ 304(ಎ) ನ್ನು ಅಳವಡಿಸಲು ಮಾನ್ಯ ನ್ಯಾಯಾಲಯಕ್ಕೆ ಪತ್ರವನ್ನು ಬರೆದಿರುತ್ತೇನೆ. ನಂತರ ಮುಂದಿನ ತನಿಖೆಗೆ ಚಾಸಾ 14

ರವರನ್ನು ಕರೆದುಕೊಂಡು ಹಾಸನ ವೈದ್ಯಕೀಯ ಕಾಲೇಜಿನ ಶವಾಗಾರಕ್ಕೆ ಹೋಗಿ ಶವಾಗಾರದಲ್ಲಿದ್ದ ಕುಮಾರ ಅಲಿಯಾಸ್ ಪುಟ್ಟ ರವರ ಶವವನ್ನು ನೋಡಿ, ಶವ ಪಂಚನಾಮೆಗೆ ಪಂಚರಾಗಿ ಕೃಷ್ಣೇಗೌಡ ಬಿನ್ ತಿಮ್ಮರಾಯಿಗೌಡ, ಜಯಪ್ಪ ಬಿನ್ ರಾಜೇಗೌಡ, ಮಂಜೇಗೌಡ ಬಿನ್ ನಿಂಗೇಗೌಡ ರವರನ್ನು ಬರಮಾಡಿಕೊಂಡುಇವರಿಗೆ ಫಾರಂ ನಂ 144 ಸಮನ್ಸ್ ಜಾರಿ ಮಾಡಿ ಪಂಚಾಯಿತಿದಾರರ ಸಮಕ್ಷಮ ಶವ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 1.30 ರವರೆಗೆ ನಡೆಸಿರುತ್ತೇನೆ. ಶವ ಪಂಚನಾಮೆ ಕಾಲದಲ್ಲಿ ಮೃತನ ರಕ್ತಸಂಬಂಧಿಯಾದ ಸಾಕ್ಷಿ ರಮೇಶಶೆಟ್ಟಿ ಬಿನ್ ಹನುಮಶೆಟ್ಟಿ, ಮತ್ತು ಇತರೆ ಸಾಕ್ಷಿದಾರರಾಗಿ ಧರ್ಮ ಬಿನ್ ಕರೀಗೌಡ, ಮತ್ತು ಧರ್ಮ ಬಿನ್ ತಿಮ್ಮರಾಯಶೆಟ್ಟಿರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಫಾರಂ ನಂ. 146, 1 ಮತ್ತು 2 ನ್ನು ತಯಾರು ಮಾಡಿ ಹಾಸನದ ವೈದ್ಯಕೀಯಕಾಲೇಜಿನ ಮುಖ್ಯಸ್ಥರಿಗೆ ಮೃತನ ಶವ ಪರೀಕ್ಷೆ ಮಾಡಿ ವರದಿ ನೀಡಲು ಚಾಸಾ 14 ರವರ ಮುಖಾಂತರ ಕೋರಿರುತ್ತೇನೆ. ನಂತರ ಚಾಸಾ 14 ರವರು ಮೃತನ ಶವವನ್ನು ಪಡೆದು ಆತನ ಕುಟುಂಬದವರಿಗೆ ಹಸ್ತಾಂತರಿಸಿ ಬಂದಿದ್ದು ಚಾಸಾ 14 ರವರ ಹೇಳಿಕೆಯನ್ನು ನಾನು ದಾಖಲಿಸಿರುತ್ತೇನೆ. ಪ್ರಕರಣವು ಘೋರ ಅಪರಾಧವಾದ ಕಾರಣ ಮುಂದಿನ ತನಿಖೆಗೆ ಚಾಸಾ16 ರವರಿಗೆ ನೀಡಿರುತ್ತೇನೆ.

1) ದಿನಾಂಕ 23.09.2017 ರಂದು ಚಾಸಾ 1 ರವರು ನೀಡಿದ ದೂರನ್ನು **ನಿಪಿ 5** ಎಂದು ಗುರುತಿಸಲಾಯಿತು.

2) ದಿನಾಂಕ 07.10.2017 ರಂದು ಕಲಂ 304(ಎ) ಅಳವಡಿಸಲು ನ್ಯಾಯಾಲಯಕ್ಕೆ ನೀಡಿದ ಅನುಮತಿ ಪತ್ರವನ್ನು **ನಿಪಿ 6** ಎಂದು ಗುರುತಿಸಲಾಯಿತು.

3) ನಿಪಿ 2 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ಸಹಿಯನ್ನು **ನಿಪಿ 2(ಬಿ)** ಎಂದು ಗುರುತಿಸಲಾಯಿತು.

4) ನಿಪಿ 1ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು **ನಿಪಿ 1(ಸಿ)** ಎಂದು ಗುರುತಿಸಲಾಯಿತು.

5) ದಿನಾಂಕ 24.09.2017 ರಂದು ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು **ನಿಪಿ 7** ಎಂದು ಗುರುತಿಸಲಾಯಿತು.

6) ಶವ ಪಂಚನಾಮೆ ವರದಿಯನ್ನು **ನಿಪಿ 8** ಎಂದು ಮತ್ತು ಸಾಕ್ಷಿಯ ಸಹಿಯನ್ನು **ನಿಪಿ 8(ಎ)** ಗುರುತಿಸಲಾಯಿತು.

7) ಶವ ಪಂಚನಾಮೆ ಸಮಯದಲ್ಲಿ ಸಾಕ್ಷಿದಾರರಾದ ರಮೇಶ ಬಿನ್ ಹನುಮಶೆಟ್ಟಿ, ಧರ್ಮ ಬಿನ್ ಕರೀಗೌಡ ಮತ್ತು ಧರ್ಮ ಬಿನ್ ತಿಮ್ಮರಾಯಿಗೌಡರವರ ಹೇಳಿಕೆಯನ್ನು **ನಿಪಿ 9, ನಿಪಿ 10 ಮತ್ತು ನಿಪಿ 11** ಎಂದು ಗುರುತಿಸಲಾಯಿತು.

8) ದಿನಾಂಕ 07.10.2017 ರಂದು ಚಾಸಾ 14 ರವರ ಹೇಳಿಕೆಯನ್ನು **ನಿಪಿ 12** ಎಂದು ಗುರುತಿಸಲಾಯಿತು.

9) ಕೃತ್ಯ ಸ್ಥಳದಲ್ಲಿ ತೆಗೆದ 4 ಛಾಯಾಚಿತ್ರಗಳನ್ನು **ನಿಪಿ 13 ರಿಂದ 16** ಎಂದು ಗುರುತಿಸಲಾಯಿತು.

10) ಶವ ಪಂಚನಾಮೆ ಸಮಯದಲ್ಲಿ ಪಡೆದಿರುವ ಛಾಯಾಚಿತ್ರಗಳನ್ನು **ನಿಪಿ 17 ಮತ್ತು ನಿಪಿ 18** ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ 18(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಶ್ರೀ. ಆರ್.ಕೆ.ಎಂ ರವರಿಂದ.</u>**

ಪಿರ್ಯಾದಿಯು ದೂರನ್ನು ನೀಡಿದ ದಿನದಂದು ಕೃತ್ಯ ನಡೆದ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆ ಸಮಯಕ್ಕೆ ಆದರೆ ಕತ್ತಲಾದ ಕಾರಣ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ದೂರು ನೀಡಿದ ಸಮಯವು ರಾತ್ರಿಯಾಗಿದ್ದ ಕಾರಣ ಆ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಲು ಸಾದ್ಯವಾಗಿರುವುದಿಲ್ಲ ಎಂದು ಸಿ.ಡಿ. ಯಲ್ಲಿ ನಮೂದು ಮಾಡಿರುತ್ತೇನೆ. ನಿಪಿ 7 ನ್ನು ನಾನೇ ತಯಾರಿಸಿರುತ್ತೇನೆ. ಕಚ್ಚಾ ನಕಾಶೆಯನ್ನು ತಯಾರಿಸುವ ಸಮಯದಲ್ಲಿ ನಾನು ಕೃತ್ಯ ಸ್ಥಳಕ್ಕೆ ಭೇಟಿ ಮಾಡಿರುವುದಿಲ್ಲ. ಸಂತೆಮರೂರಿನಿಂದ ಬಿಟ್ಟಗೌಡನಹಳ್ಳಿ 3 ರಿಂದ 4 ಕಿ.ಮೀ ಅಂತರದಲ್ಲಿರುತ್ತದೆ. ಸಂತೆಮರೂರಿನಿಂದ ಬಿಟ್ಟಗೌಡನಹಳ್ಳಿಯ ಅಂತರದಲ್ಲಿರುವ 4 ಕಿ.ಮೀ ರಸ್ತೆಯು ಡಾಂಬರು ರಸ್ತೆಯೇ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಈಗ ಹೇಳಲು ಬರುವುದಿಲ್ಲ ಆದರೆ ಕೃತ್ಯ ನಡೆದ ಸ್ಥಳವು ಡಾಂಬರು ರಸ್ತೆ ಎಂದು ನುಡಿಯುತ್ತಾರೆ. ನಿಪಿ 7 ರಲ್ಲಿ 10 ಅಡಿ ಟಾರು ರಸ್ತೆ ಎಂದು ನಮೂದು ಮಾಡಿರುತ್ತೇವೆ ಹಾಗಾದರೆ ಸಾಮಾನ್ಯವಾಗಿ 10 ಅಡಿ ಟಾರು ರಸ್ತೆಯಲ್ಲಿ ಯಾವುದೇ ಬೃಹತ್ ಗಾತ್ರದ ವಾಹನವು ಬಂದಾಗ ಎದುರಿನಿಂದ ಬರುವ ವಾಹನವು ಆ ಬೃಹತ್ ವಾಹನವು ಹೋಗಲು ದಾರಿ ಕೊಡಲು ಮರೆಗೆ ಬರಬೇಕು ಎಂದರೆ ಸಾಕ್ಷಿಯು ಹಗಲು ಸಮಯದಲ್ಲಾದರೆ ಹೋಗಬಹುದು, ರಾತ್ರಿ ಸಮಯದಲ್ಲಿ ಕಷ್ಟವಾಗಬಹುದು ಎಂದು ನುಡಿಯತ್ತಾರೆ. ಕೃತ್ಯ ನಡೆದ ಸಮಯದಲ್ಲಿ ಆರೋಪಿಯು ಚಲಿಸುತ್ತಿದ್ದ ವಾಹನದ ಎದುರಿನಿಂದ 10 ಚಕ್ರದ ಬೃಹತ್ ವಾಹನವು ಬಂದ ಕಾರಣ ಆರೋಪಿಯಯು ಓಡಿಸುತ್ತಿದ್ದ ವಾಹನವು ಮರೆಗೆ ಹೋಗಿದ್ದು ಅಲ್ಲಿ ಡ್ರೈನೇಜ್ ಇರುತ್ತದೆ ಆದ ಕಾರಣ ಮೃತನಿಗೆ ಗಾಯವಾಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು ಓಡಿಸುತ್ತಿದ್ದ ವಾಹನವನ್ನು ಆತನೇ ಅತಿವೇಗದಿಂದ ಚಲಿಸಿಕೊಂಡು ಬಂದಿರುತ್ತಾರೆ ಎಂದು ಹೇಳುತ್ತಾರೆ. ನಾನು ಸ್ಥಳ ಮಹಜರ್ ನ್ನು ಮಾಡಿರುತ್ತೇನೆ. ನಾನು ಕೃತ್ಯದ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳ ಮಹಜರ್ ಮತ್ತು ಕಚ್ಚಾ ನಕಾಶೆಯನ್ನು ಠಾಣೆಯಲ್ಲಿ ಕುಳಿತು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮ ನಾನು ಮಹಜರ್ ಮಾಡಿರುವುದಿಲ್ಲ ಮತ್ತು ಪಂಚರ ಸಹಿಯನ್ನು ನಾನು ಠಾಣೆಯಲ್ಲೇ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪು ಮಾಡದಿದ್ದರೂ ಲಾರಿ ಮಾಲೀಕರ ಮತ್ತು

ಮೃತನ ತಾಯಿಯಾದ ಚಾಸಾ 1 ರವರ ಮಾತನ್ನು ಕೇಳಿ ಸುಳ್ಳು ದಾಖಲಾತಿಯನ್ನು ಆರೋಪಿಯ ವಿರುದ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**